ಸರ್ಕಾರಗಳು ಆಸ್ಥೆಯಿಂದ ರೂಪಿಸುತ್ತವೆ ಎಂದು ಆಶಿಸೋಣವೇ?

### ಸ್ಪಷ್ಟ ನೀತಿಗಳು ಬೇಕಿವೆ

ದೇಶದ ಬಹುದೊಡ್ಡ ವಲಯವಾದ ಕೃಷಿಯತ್ತ ನೀತಿ ನಿರೂಪಕರು ಗಂಭೀರವಾಗಿ ಗಮನಹರಿಸಲೇಬೇಕು. ನಾನಾ ಕಾರಣಗಳಿಂದಾಗಿ ಅಧ್ವಾನಗಳ ಆಡುಂಬೊಲವಾದ ಬೇಸಾಯ ವಲಯವು, ಉತ್ಪಾದನೆ ದೃಷ್ಟಿಯಲ್ಲಿ ಅಗಾಧ ಸಾಧನೆ ಮಾಡಿದರೂ ಅದರ ಮೂಲಕಾರಣಕರ್ತರಾದ ರೈತನ ಏಳಿಗೆಯ ದೃಷ್ಟಿಯಲ್ಲಿ ಈಗಲೂ ತೀರಾ ಹಿಂದೆ. ವಾಣಿಜ್ಯ ಬೆಳೆಯ ಭರಾಟೆಯಲ್ಲಿ ಬೆಳೆಗಳ ಆಯ್ಕೆಯಲ್ಲಿ ರೈತರು ಯೋಚಿಸಿದ್ದೇ ಕಡಿಮೆ. ಒಂದು ವಲಯದಲ್ಲಿ ಲಾಭದಾಯಕ ಅನಿಸುವ ಬೆಳೆಗಳು, ಎಲ್ಲ ಕಡೆಗೂ ಹಾಗೇ ಆದಾಯ ಕೊಡುತ್ತೇವೆಂದಲ್ಲ. ಇದರ ಬಗ್ಗೆ ಸ್ಪಷ್ಟ ತಿಳಿವಳಿಕೆ ಇಲ್ಲದ ಕಾರಣದಿಂದಾಗಿ, ಕೊಪ್ಪಳದಂಥ ಬಿಸಿಲಿನ ನಾಡಿಗೂ ಅಡಿಕೆ, ವಿಜಯಪುರದಲ್ಲಿ ಸೇಬು ಕೃಷಿ ಕಾಲಿಟ್ಟಿವೆ! ಮುಂದೆ ನಷ್ಟ ಅನುಭವಿಸುವ ರೈತರಿಗೆ ಪರಿಹಾರವಾದರೂ ಸಿಕ್ಕೀತೇನು?

ಈ ಹಿನ್ನೆಲೆಯಲ್ಲಿ ವಲಯವಾರು ಬೆಳೆಗಳ ಆಯ್ಕೆಗೆ ನೀತಿ ರೂಪಿಸಬೇಕಿದೆ ಹಾಗೂ ಆ ಬೆಳೆಗೆ ವೈಜ್ಞಾನಿಕ ಬೆಲೆ ನಿಗದಿ ಮಾಡಬೇಕಿದೆ. ಇದರಿಂದ ಸರ್ಕಾರಗಳ ಮೇಲೆ ಒತ್ತಡ ಕಡಿಮೆಯಾಗುವುದರ ಜತೆಗೆ, ರೈತರಿಗೂ ಒಳಿತಾದೀತು. ಈ ವರ್ಷದಲ್ಲಾದರೂ ವಲಯವಾರು ಕೃಷಿ ಬೆಳೆಗಳ ಅಧ್ಯಯನ ನಡೆದು, ರೈತರಿಗೆ ಮಾರ್ಗದರ್ಶನ ಸಿಕ್ಕೀತು ಎಂದು ಆಶಿಸೋಣವೇ?

ಸರ್ಕಾರಿ ಇಲಾಖೆಗಳ ಮೂಲಕ ರೈತರನ್ನು ಆಹ್ವಾನಿಸಿ ಮೇಳಗಳನ್ನು ನಡೆಸುವುದೊಂದು 'ವಿಚಿತ್ರ ಲಕ್ಷಣ' ಎಂದೇ ಭಾವಿಸಬೇಕಾಗಿದೆ. ಲಕ್ಷಗಟ್ಟಲೇ ರೈತರು ಬರುತ್ತಾರೆ, ಹೋಗುತ್ತಾರೆ. ಆದರೆ ಅಂಥ ಕೃಷಿಮೇಳಗಳಿಂದ ಸಿಕ್ಕಿದ್ದೇನು ಎಂದು ಯಾರೂ ಗಂಭೀರವಾಗಿ ಯೋಚಿಸುವುದಿಲ್ಲ. ಅದರ ಬದಲಿಗೆ ಕೃಷಿಕರು ಅಳವಡಿಸಿಕೊಂಡಿರುವ ಪರಿಸರಸ್ನೇಹಿ ವಿಧಾನಗಳನ್ನು ರೈತರ ಹೊಲ–ತೋಟ–ಗದ್ದೆಗಳಿಗೆ ವಿಸ್ತರಿಸಲು ಆ ಮೇಳಗಳನ್ನು ಅವಕಾಶದ ವೇದಿಕೆಯಾಗಿ ಬಳಸಿಕೊಳ್ಳುವ ದಾರಿಯತ್ತ ಕೃಷಿ ವಿಶ್ವವಿದ್ಯಾಲಯಗಳು ಯೋಚಿಸಿದ್ದೇ ಕಡಿಮೆ. ಉಳಿದಂತೆ ರೈತಪರ ಚಿಂತನೆಯ ಸಂಘ–ಸಂಸ್ಥೆಗಳು ನಡೆಸುವ ವಿಚಾರಸಂಕಿರಣದ ಶಿಫಾರಸುಗಳನ್ನು ಅವಲೋಕಿಸುವ ಪರಿಪಾಠವೂ ಈ ಕೃಷಿ ವಿವಿಗಳಿಗೆ ಇದ್ದಂತಿಲ್ಲ. ಹಾಗಿದ್ದರೂ ಕೆಲವು ಸಂಘಟನೆಗಳು ತಮ್ಮ ಸೀಮಿತ ಸಾಮರ್ಥ್ಯದಲ್ಲಿ ರೈತ ಮೇಳಗಳನ್ನು ನಡೆಸುತ್ತಲೇ ಇವೆ. ಇಲ್ಲಿಗೆ ರೈತರು ಖುದ್ದಾಗಿ ಆಸಕ್ತಿಯಿಂದ ಬರುತ್ತಾರೆ. ಅವರ ಅನುಭವಗಳ ಪಾಠಗಳನ್ನು ಕೃಷಿ ವಿವಿ, ಅಧಿಕಾರಿಶಾಹಿ ಜತೆಗೆ ಜನಪ್ರತಿನಿಧಿಗಳೂ ಗಂಭೀರವಾಗಿ ಕೇಳಿಸಿಕೊಳ್ಳಬೇಕು. ಕೃಷಿ ಕ್ಷೇತ್ರದ ಸಂಕಟಗಳಿಗೆ ಪ್ರಾಮಾಣಿಕ ಪರಿಹಾರ ಅಲ್ಲಿ ಖಂಡಿತವಾಗಿಯೂ ಸಿಗುತ್ತದೆ. ಮೈಸೂರಿನಲ್ಲಿ ನವೆಂಬರಿನಲ್ಲಿ ನಡೆದ 'ಕಿಸಾನ್ ಸ್ವರಾಜ್ ಸಮ್ಮೇಳನ' ಇದಕ್ಕೆ ತಾಜಾ ಉದಾಹರಣೆ. ಪಶ್ಚಿಮ ಬಂಗಾಳ, ಒಡಿಶಾ, ಆಂಧ್ರ, ಕೇರಳದ ವಿಜ್ಞಾನಿಗಳು, ಅಧಿಕಾರಿಗಳು ಸಕ್ರಿಯವಾಗಿ ಪಾಲ್ಗೊಂಡಿದ್ದ ಈ ಸಮ್ಮೇಳನದಲ್ಲಿ 'ನಮ್ಮವರೇ' ಅದೃಶ್ಯ! 'ಸರ್ಕಾರಿ ಜಾತ್ರೆ' ಎಂಬ ನುಡಿಗಟ್ಟಿಗಿಂತ 'ರೈತರಿಗೆ ಉಪಯುಕ್ತ ಮೇಳ'ಗಳನ್ನು ಈ ವರ್ಷವಾದರೂ ನೋಡಲಿದ್ದೇವೆಯೇ? ■

**2023 ಸಮಾಜ-ಸೌಹಾರ್ದ**

# ಸಂವಿಧಾನ ರಕ್ಷಣೆಗೆ ನಮ್ಮ ದನಿ

**ಮನೆ–ಮನಸುಗಳಿಗೆ ಭಾರತದ ಬಹುತ್ವ ಸಂಸ್ಕೃತಿಯನ್ನು, ಪ್ರಜಾಪ್ರಭುತ್ವವನ್ನು ತಲುಪಿಸುವ ಕೆಲಸ ಮಾಡಬೇಕು.**



**ದು. ಸರಸ್ವತಿ**
ಸಾಹಿತಿ, ಸಾಮಾಜಿಕ ಕಾರ್ಯಕರ್ತೆ

ಸಮಾಜದ ಜವಾಬ್ದಾರಿಯುತ ನಾಗರಿಕಳಾಗಿ ನಾನು ಹೊಸ ವರ್ಷಕ್ಕೆ ಯಾವ ನಿರೀಕ್ಷೆಯನ್ನು ಇಟ್ಟುಕೊಂಡಿಲ್ಲ. ಆದರೆ, ಮಾಡಲು ಸಾಕಷ್ಟು ಕೆಲಸಗಳು ಇವೆ ಎಂದು ನಂಬಿಕೊಂಡಿದ್ದೇನೆ.

ಕೋವಿಡ್ ಸಂದರ್ಭದಲ್ಲಿ ಲಾಕ್‌ಡೌನ್ ಆಗಿದ್ದರಿಂದ ವಲಸೆ ಕಾರ್ಮಿಕರು ನಡೆದುಕೊಂಡು ಹೋದರು. ಆಗ ನನ್ನ ಪರಿಚಿತರೊಬ್ಬರು ಅವರನ್ನು ಮಾತನಾಡಿಸಿ, 'ಸಂಚಾರಕ್ಕೆ ಬಸ್ಸು–ರೈಲಿನ ವ್ಯವಸ್ಥೆ ಮಾಡಿದ್ದಾರೆ. ಅದರಲ್ಲಿ ಹೋಗುವುದಲ್ಲವೇ?' ಎಂದು ಕೇಳಿದ್ದಾರೆ. ಅದರಲ್ಲಿ ಒಬ್ಬ, 'ನಾನು ನಂಬುವುದು ನನ್ನ ಕಾಲನ್ನು ಮಾತ್ರ' ಎಂದಿದ್ದಾನೆ. ಅಂತೆಯೇ ಆಧಾರ್ ಕಾರ್ಡ್ ಇಲ್ಲದವರಿಗೆ ಊಟ ನೀಡುವುದಿಲ್ಲ ಎಂದು ವ್ಯವಸ್ಥೆ ಹೇಳಿತ್ತು. ಆಗ ಹಸಿದವರಿಗೆ ಅನ್ನ ನೀಡಲು ಹೈಕೋರ್ಟ್‌ನಿಂದ ಆದೇಶವನ್ನು ಹೊರಡಿಸಬೇಕಾಯಿತು. ಕೋವಿಡ್ ಅವಧಿಯಲ್ಲಿ ಬಡವರ ಪಾಡು ಬಡವರೇ ಅನುಭವಿಸಬೇಕು ಎನ್ನುವುದು ಸ್ಪಷ್ಟವಾಗಿ ಗೋಚರಿಸಿದೆ.

ಬಿಲ್ಕಿಸ್ ಬಾನು ಅತ್ಯಾಚಾರ ಪ್ರಕರಣದಲ್ಲಿ ಅಪರಾಧಿಗಳನ್ನು 'ಅವರು ಪರಿವರ್ತನೆ ಆಗಿದ್ದಾರೆ' ಎಂದು ಬಂಧಮುಕ್ತ ಮಾಡಿದ್ದಾರೆ. ಹಿಜಾಬ್ ಹೆಸರಿನಲ್ಲಿ ಹೆಣ್ಣುಮಕ್ಕಳ ಅಕ್ಷರವನ್ನು ಕಿತ್ತುಕೊಂಡಿದ್ದಾರೆ. ನೀರು ಮುಟ್ಟಿದ್ದಕ್ಕೆ ಮಗುವನ್ನು ಹತ್ಯೆ ಮಾಡಿದ್ದು, ದೇವರಕೋಲು ಸ್ಪರ್ಶಿಸಿದ್ದಕ್ಕೆ ಅವರ ಕುಟುಂಬಕ್ಕೆ ದಂಡ–ಬಹಿಷ್ಕಾರ ಹಾಕಿದ್ದು, ದಲಿತ ಹೆಣ್ಣುಮಕ್ಕಳ ಮೇಲೆ ನಡೆಯುತ್ತಿರುವ ನಿರಂತರ ಅತ್ಯಾಚಾರ, ಇನ್ನೂವರೆಗೆ ಪೌರಕಾರ್ಮಿಕರಿಗೆ ಕಾಯಂ ಉದ್ಯೋಗ ಇಲ್ಲದೇ ಇರುವ ಘಟನೆಗಳನ್ನು ನೋಡಿದಾಗ ಭಾರತದ ಸಂವಿಧಾನದ ಮೌಲ್ಯಗಳ ಮೇಲೆ ಮತ್ತು ಅದರ ಆಶಯಗಳಿಗೆ ಧಕ್ಕೆಯಾಗುತ್ತಿದೆ ಎಂದು ಅನಿಸುತ್ತದೆ. ಭಾರತೀಯ ಬಹುತ್ವ ಮತ್ತು ಬಂಧುತ್ವದ ಸಂಸ್ಕೃತಿಯ ಮೇಲೆ ಆಗುತ್ತಿರುವ ಈ ದಾಳಿಗಳು ನನ್ನನ್ನು ಆತಂಕಿತಳನ್ನಾಗಿ ಮಾಡುತ್ತಿವೆ.

ಇದು ಸಾಂಸ್ಕೃತಿಕ ರಾಜಕೀಯ, ಆರ್ಥಿಕ–ಸಾಮಾಜಿಕ ಯಜಮಾನ್ಯಕ್ಕೂ ಮತ್ತು ಪಿತೃ ಪ್ರಧಾನತೆಗೂ ಇರುವ ನಿಕಟ ನಂಟನ್ನು ಬಿಂಬಿಸುತ್ತದೆ. ಹಾಗಾಗಿ ನಾವು ಮನೆ ಮನೆಗೆ, ಮನಸು ಮನಸುಗಳಿಗೆ ಭಾರತದ ಬಹುತ್ವ ಸಂಸ್ಕೃತಿಯನ್ನು, ಪ್ರಜಾಪ್ರಭುತ್ವವನ್ನು ತಲುಪಿಸುವ ಕೆಲಸ ಮಾಡಬೇಕು. ನ್ಯಾಯಮೂರ್ತಿ ಮುರಳೀಧರ್ ಒಂದು ಕಡೆ, 'ನ್ಯಾಯಾಲಯಗಳು ಬಲಾಢ್ಯರು ಮತ್ತು ವಂಚಿತರ ನಡುವಿನ ವ್ಯತ್ಯಾಸವನ್ನು ತಿಳಿದುಕೊಳ್ಳಬೇಕು. ಸಮಯ ಬಂದರೆ ಸಂವಿಧಾನದ ಹಿನ್ನೆಲೆಯಲ್ಲಿ ಬಡವರ ಪರ ವಾಲಬೇಕು' ಎಂದು ಹೇಳುತ್ತಾರೆ. ಅಂದರೆ ಸಂವಿಧಾನದ ಮೌಲ್ಯಗಳ ರಕ್ಷಣೆಗಾಗಿ ಈ ಶೋಷಿತರ ಪಕ್ಷಪಾತಿ ಆಗಬೇಕೆನ್ನುವುದು ನನ್ನ ಆಶಯವೂ ಹೌದು. ಈ ಹಿನ್ನೆಲೆಯಲ್ಲಿ ಬಡವರು, ದಲಿತರು, ಆದಿವಾಸಿಗಳು, ಧಾರ್ಮಿಕ ಮತ್ತು ಲಿಂಗತ್ವ ಅಲ್ಪಸಂಖ್ಯಾತರ ಪರವಾಗಿ ಕೆಲಸ ಮಾಡುವುದು ಅಗತ್ಯ. ಈ ಬಗೆಯಿಂದಲೇ ಭಾರತದ ಬಹುತ್ವ, ಪ್ರಜಾಪ್ರಭುತ್ವ, ಸಂವಿಧಾನವನ್ನು ರಕ್ಷಿಸಲು ಸಾಧ್ಯ. ಪ್ರಸ್ತಾಪಿತ ಪೌರತ್ವ ತಿದ್ದುಪಡಿ ಕಾಯ್ದೆ ವಿರುದ್ಧ ನಡೆದ ಶಾಹಿನ್ ಭಾಗ್ ಹೋರಾಟ, ರೈತ ಚಳವಳಿಗಳು, ವಲಸೆ ಕಾರ್ಮಿಕರ ಹೋರಾಟದ ಮೂಲಕ ಅದನ್ನು ಸಾಬೀತು ಮಾಡಿ ತೋರಿಸಿದ್ದಾರೆ. ಆ ಹೋರಾಟಗಳಿಗೆ ಬೆಂಬಲಿಸಬೇಕು. ಅವರೇ ಭಾರತದ ಸಂವಿಧಾನದ ರಕ್ಷಕರು ಎಂಬ ನಿರೀಕ್ಷೆ–ಭರವಸೆ ಇಟ್ಟು ಸಂವಿಧಾನದ ಆಶಯಗಳ ಜಾರಿಗೊಳಿಸಲು ಅವರ ಜೊತೆ ಕೆಲಸ ಮಾಡಬೇಕು.

ಭಾರತ ಸಂವಿಧಾನ, ಬಹುತ್ವ ಸಂಸ್ಕೃತಿ ಮತ್ತು ಪ್ರಜಾಪ್ರಭುತ್ವವನ್ನು ಕೊಟ್ಟಿದೆ. ಆದರೆ ಅದು ಸಮುದಾಯಕ್ಕೆ ತಲುಪದಂತೆ ತಪ್ಪಿಸಲಾಗುತ್ತಿದೆ. ಇದರ ವಿರುದ್ಧದ ದನಿಗೆ ಬೆಂಬಲಿಸುವುದು ನನ್ನ ಆದ್ಯತೆ. ದುಡಿಯುವ ವರ್ಗವೇ ಪ್ರಜಾಪ್ರಭುತ್ವವನ್ನು ಉಳಿಸುತ್ತಿದೆ ಮತ್ತೂ ಉಳಿಸುತ್ತದೆ ಎಂದುಕೊಂಡಿದ್ದೇನೆ. ■

**ಪ್ರತಿಕ್ರಿಯಿಸಿ** ರಚನಾತ್ಮಕ ಟೀಕೆ–ಟಿಪ್ಪಣಿಗಳಿಗೆ ಸ್ವಾಗತ. ಪ್ರತಿಕ್ರಿಯೆ ಚುಟುಕು, ಚುರುಕಾಗಿರಲಿ. ಇ–ಮೇಲ್: feedback@sudha.co.in